Rotary

ರೋಟರಿ **ಐಸಿರಿ** ಪರ್ಕಳ

ವಲಯ-4, ರೋ. ಜಿಲ್ಲೆ-3182

ನಮ್ಮ ನಡೆ... ಕೃಷಿಯ ಕಡೆ...

UNITE FOR GOOD





# ಐಶ್ವರ್ಯ


ಸಂಪುಟ: 4 ಸಾಪ್ತಾಹಿಕ ಸಂಚಿಕೆ : 13

ದಿನಾಂಕ: 30.09.2025





Rtn. Francesco Arezzo
R.I. President

Rtn. K. Palaksha
District Governor

Rtn. Anil Kumar
President

Rtn. Krishnappa
Secretary

## ಮತ್ತೊಮ್ಮೆ ಬರುತ್ತಿದೆ ರೋಟರಿ ಸಾಂಸ್ಕೃತಿಕ ಉತ್ಸವ

ರೋಟರಿ ಐಸಿರಿ ಯು ಉತ್ಸಾಹದಿಂದ ಪಾಲ್ಗೊಳ್ಳುವ ರೋಟರಿ ಜಿಲ್ಲಾ ಸಾಂಸ್ಕೃತಿಕ ಉತ್ಸವ District Cultural Meet ಶೃಂಗೇರಿಯಲ್ಲಿ ನವೆಂಬರ್ 23ರಂದು ನಡೆಯಲಿದ್ದು, ಅದಕ್ಕೂ ಮೊದಲೇ ವಲಯ ಮಟ್ಟದ ಸ್ಪರ್ಧೆಗಳು ಆಯೋಜನೆಗೊಳ್ಳುತ್ತಿವೆ.

### List Of Events

| Sl. No. | Events | Duration | Participants | Mandatory Conditions |
|---|---|---|---|---|
| 1 | Janapada Geethe (Folk Song) | 4 Min | Only for Women (Lady Rotarians or Anns) | Only Female participants are allowed, either Lady Rotarians or Anns |
| 2 | Film Song (Solo) | 4 Min | Only for Men (Rotarians or Spouse of Lady Rotarians) | Only Male participants are allowed, either Rotarians or Spouse of Lady Rotarians |
| 3 | Duet Song | 4 Min | Rotarian(Male/Female) with Ann or Annet or John or Spouse of Lady Rotarian | One Rotarian is compulsory and should be a combination of male and female |
| 4 | Mono Acting | 4 Min | Rotarians (Male or Female) | Event is only for Rotarians or Lady Rotarians and costumes are not compulsory |
| 5 | Group Dance (Only for Filmy or Folk songs) | 4 Min | Min 6 and maximum 12 participants with combination of Rotarians, Anns and Annet/John. | Group should be combination of Rotarians, Anns and Annet/John and performance has to be continuous dance form. Acting or Nrithya Roopaka are not allowed |
| 6 | Group Song (Mix of 2 or more songs are not allowed) | 4 Min | Min 6 and maximum 12 participants with combination of Rotarians, Anns and Annet/John. | Group should be combination of Rotarians, Anns and Annet/John and should sing only one song (mixing of different songs are not allowed) |
| 7 | Dance (Solo) | 4 Min | Annet or John | Age limit is 18 years (born on or after 01-11-2007 & should provide the proof) |
| 8 | Skit | 12 Min | Min 6 and maximum 15 participants with combination of Rotarians, Anns and Annet/John | Group should be combination of Rotarians, Anns and Annet/John and rotary theme is not compulsory. |
| 9 | Dance (Solo) (Film Song) | 4 Min | Rotarians (Male or Female) | Event is only for Rotarians or Lady Rotarians |



## ಪ್ರೇರಣಾ ಸಿರಿ

**ನಾವು ಆಡುವ ಮಾತುಗಳು ಇನ್ನೊಬ್ಬರ ಜೀವನಕ್ಕೆ ದಾರಿಯಾಗಲಿ!**

– ರೊ. ಸುಕೇಶ್ ಕುಂದರ್

ನಾವು ಕ್ಷಣದ ಕೋಪ, ದರ್ಪದಲ್ಲಿ ಆಡುವ ಮಾತುಗಳು ಅಥವಾ ಮಾಡುವ ಕೆಲಸಗಳು ಮತ್ತೊಬ್ಬರ ಮನಸ್ಸಿನಲ್ಲಿ ಎಷ್ಟು ಆಳವಾದ ಗಾಯವನ್ನು ಉಂಟು ಮಾಡಬಹುದು ಎಂಬ ಅರಿವು ನಮಗಿರುವುದಿಲ್ಲ.

ಕೆಲವೊಮ್ಮೆ ಕೆಲವರು ಆಡಿದ ಮಾತಿನಿಂದ ಆ ನೋವು ಸಹಿಸಿಕೊಳ್ಳಲಾರದೆ ಊರು ಬಿಟ್ಟವರಿದ್ದಾರೆ, ಮರ್ಯಾದೆಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡು ಜೀವ ಬಿಟ್ಟವರು ಇದ್ದಾರೆ. ಆದ್ದರಿಂದ ಮಾತನಾಡುವ ಮೊದಲು ಯೋಚಿಸಿ, ತಾಳ್ಮೆಯಿಂದ ಮಾತಾಡುವುದು ಮುಖ್ಯ.

ಕೆಲವೊಮ್ಮೆ ನಾವು ಒಬ್ಬರ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೇ, ಯಾರೋ ಹೇಳಿದ್ದು ಕೇಳಿ ಮಾತನಾಡಬಾರದು. ನಾವು ಇನ್ನೊಬ್ಬರ ಬಗ್ಗೆ ತೆಗಳಿ ಕೆಟ್ಟದಾಗಿ ಮಾತನಾಡಿದರೆ ಅದು ಕೇಳುವವರ ಹೃದಯದಲ್ಲಿ ಶಾಶ್ವತ ನೋವನ್ನು ಕೊಡುವುದಲ್ಲದೆ, ನಮ್ಮ ಮೇಲೆ ಇದ್ದ ಪ್ರೀತಿ, ಗೌರವ, ನಂಬಿಕೆಯು ಹೋಗುತ್ತದೆ.

ದಯವಿಟ್ಟು ನಾವು ಸದಾ ಪ್ರೀತಿ, ಕರುಣೆ ಮತ್ತು ವಿವೇಕದಿಂದ ಮಾತನಾಡೋಣ. ನಮ್ಮ ಮಾತಿನಿಂದ ಯಾರಿಗೂ ನೋವಾಗದಂತೆ ನೋಡಿಕೊಳ್ಳೋಣ. ಇನ್ನೊಬ್ಬರ ಭಾವನೆಗಳಿಗೆ ಗೌರವ ನೀಡುವುದು ನಮ್ಮ ಕರ್ತವ್ಯ. ಸೋತವರನ್ನು ಬೆನ್ನು ತಟ್ಟಿ ಹುರಿದುಂಬಿಸುವ ಮಾತುಗಳನ್ನಾಡಿ, ಅವರಿಗೆ ಶಕ್ತಿ ನೀಡೋಣ.

ನಮ್ಮ ನಾಲಿಗೆಯನ್ನು ನಿಯಂತ್ರಿಸಿ, ನಮ್ಮ ಮಾತುಗಳು ಕತ್ತಲೆಯ ಜೀವನದಲ್ಲಿ ಇರುವವರಿಗೆ ಬೆಳಕಾಗಲಿ. ಸಣ್ಣವರಿರಲಿ, ದೊಡ್ಡವರಿರಲಿ, ಬಡವರಿರಲಿ, ಶ್ರೀಮಂತರೇ ಇರಲಿ, ಮಹಿಳೆಯರಿರಲಿ, ಪುರುಷರಿರಲಿ, ಎಲ್ಲರಿಗೂ ಗೌರವ ಕೊಟ್ಟು ಮಾತನಾಡೋಣ.

ಮಾತು ಒಂದು ಶಕ್ತಿ. ಅದು ಇನ್ನೊಬ್ಬರ ಜೀವನದಲ್ಲಿ ಬೆಳಕಾಗಿ ಉರಿಯುವ ದಾರಿ ದೀಪವಾಗಲಿ.

ವಿಜಯದಶಮಿಯ ಹಾರ್ದಿಕ ಶುಭಾಶಯಗಳು.

## ಮಾತಿನ ಬಗ್ಗೆ ಒಂದಷ್ಟು ಮಾತು:

ತಾಳಿದವನು ಬಾಳಿಯಾನು
ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದೀತೇ
ಮಾತೇ ಮುತ್ತು … ಮಾತೇ ಮೃತ್ಯು … ಮಾತು ಆಡಿದರೆ ಹೋಯಿತು ….
ಮುತ್ತು ಒಡೆದರೆ ಹೋಯಿತು
ನುಡಿದರೆ ಮುತ್ತಿನ ಹಾರದಂತಿರಲಿ
ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.
ಆಡಿ ತಪ್ಪ ಬೇಡ ಓಡಿ ಸಿಕ್ಕ ಬೇಡ
ಆಡುತ್ತಾ ಆಡುತ್ತಾ ಭಾಷೆ, ಹಾಡುತ್ತಾ ಹಾಡುತ್ತಾ ರಾಗ
ಮಂತ್ರಕ್ಕಿಂತ ಉಗುಳು ಜಾಸ್ತಿ
ಊದಿ ಕೆಟ್ಟ ಬೂದಾಳ ದಾಸ
ಗಿಳಿ ಮಾತಾಡಿದಂಗೆ ಮೆಲ್ಲಗೆ ನುಡಿ
ನಾಲಿಗೆಯಿಂದ ಕೆಳಗೆ ಬಿದ್ದರೆ ನರಕ
ಮಾತು ಬೆಳ್ಳಿ, ಮೌನ ಬಂಗಾರ.
ಮಾತು ಮನೆ ಮುರೀತು, ತೂತು ಓಲೆ ಕೆಡಿಸಿತು
ಇದ್ದದ್ದು ಇದ್ದಂತೆ ಹೇಳಿದರೆ ಹದ್ದಿನಂತ ಮೋರೆ ಆಯಿತು
ಉದ್ದುದ್ದ ಮಾತಿನವರ ಮೊಳಕ್ಕೆ ಮೊಂಡ
ಜಾಣನಿಗೆ ಮಾತಿನ ಪೆಟ್ಟು, ದಡ್ಡನಿಗೆ ದೊಣ್ಣೆ ಪೆಟ್ಟು
ಹೇಳಿಕೆ ಮಾತು ಕೇಳಿ ಹೆಂಡ್ರನ್ನ ಬಿಟ್ಟ
ನಿಜ ಆಡಿದರೆ ನಿಷ್ಠೂರ
ಇದ್ದದ್ದು ಇದ್ದಂತೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದಂತೆ
ಆಗೋ ಪೂಜೆ ಆಗುತ್ತಿರಲಿ ಊದೋ ಶಂಖ ಊದಿ ಬಿಡುವ
ಯುಕ್ತಿಯ ಮಾತು ಮಕ್ಕಳಿಂದಾದರೂ ತಿಳುಕೊ
ಬಾಯಲೆಲ್ಲಾ ವೇದಾಂತ, ಮಾಡುವುದೆಲ್ಲಾ ರಾದ್ಧಾಂತ.
ಬಿಡುಕು ಮಾತಿಗೆ ಮಾಡಿಕೊಳ್ಳದಿರು ಕೆಡುಕು.
ಕೃತಿ ಇಲ್ಲದ ಮಾತು ಕಸ ಬೆಳೆದ ತೋಟವಿದ್ದಂತೆ.
ಆಡೋದು ಮಡಿ ಉಂಬೋದು ಮೈಲಿಗೆ
ರಾಗ ನೆನೆಪಾದಾಗ ತಾಳ ಮರೆತು ಹೋಯಿತಂತೆ
ಒಂಡಂಬಡಿಕೆ ಇಂದ ಆಗದು ದಡಂಬಡಿಕೆ ಇಂದ ಆದೀತೇ
ಸಂತೇಲಿ ಮಂತ್ರ ಹೇಳಿದಂಗೆ
ಹೇಳೊದು ವೇದ ಹಾಕೊದು ಗಾಳ
ಪುರಾಣ ಹೇಳೊಕೆ; ಬದನೆಕಾಯಿ ತಿನ್ನೋಕೆ
ಇಬ್ಬರ ಜಗಳ ಮೂರನೆಯವನಿಗೆ ಲಾಭ
ಮಾಡಿದೋರ ಪಾಪ ಆಡಿದೋರ ಬಾಯಲ್ಲಿ
ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ
ಮಂತ್ರಕ್ಕೆ ಮಾವಿನ ಕಾಯಿ ಉದುರುತ್ತದೆಯೆ ?
ನಮ್ಮ ದೇವರ ಸತ್ಯ ನಮಗೆ ಗೊತ್ತಿಲ್ಲವೇ ?
ಬೈದು ಹೇಳಿದವರು ಬದುಕಕ್ಕೆ ಹೇಳಿದರು
ಖಂಡಿತ ವಾದಿ, ಲೋಕ ವಿರೋಧಿ
ಕಡ್ಡೀನ ಗುಡ್ಡ ಮಾಡು
ಎದ್ದೋಗೋ ಮಾತು ಬಿದ್ದೋಗಲಿ ಆಡೋಕಾಗಲ್ಲ, ಅನುಭವಿಸಕ್ಕಾಗಲ್ಲ
ಬರೀ ಮಾತಾಡಿ ಬೈಯ್ಯಿಸಿಕೊಂಡ
ಒಪ್ಪದಾ ಮಾತಾಡಿ ಕೋಪಕ್ಕೆ ತುತ್ತಾದ
ಹಸನಾದ ಮಾತಿಗೆ ಜೀವ ಬೆಸನಾಯ್ತು
ನಕ್ಕು ನುಡಿದವರು ಕಡೆಗೆ ಅಡವಿಯಲಿಕ್ಕಿ ಬರುವರು
ತನ್ನ ತಾ ಬಲ್ಲವನೆ ಬಲ್ಲವ…..

## ಬೌದ್ಧಿಕ ಸಿರಿ

ಒಂದೂರಿನಲ್ಲಿ ಬಹಳ ಮಳೆ ಬಂದು ಆ ಊರಿನ ನದಿ ಉಕ್ಕಿ ಹರಿಯಲು ಆರಂಭಿಸಿತು. ಅಪಾಯವನ್ನು ಅರಿತ ಜನರು ಸುರಕ್ಷಿತ ಸ್ಥಳಕ್ಕೆ ಗುಳೇ ಹೋಗಲು ಆರಂಭಿಸಿದರು.

ಅಲ್ಲಿಯ ದೇವಸ್ಥಾನ ಒಂದರಲ್ಲಿ ನಿತ್ಯ ಪೂಜೆ ಮಾಡುತ್ತಾ ದೇವರ ಸೇವೆಯನ್ನು ನಿಷ್ಠೆಯಿಂದ ಮಾಡುತ್ತಿದ್ದ ವ್ಯಕ್ತಿಯನ್ನೂ ಈ ಜನರು ಸುರಕ್ಷಿತ ಸ್ಥಳಕ್ಕೆ ಹೋಗೋಣ ಬನ್ನಿ ಎಂದು ಕರೆದರು.

ಆದರೆ ಆ ವ್ಯಕ್ತಿಯು ನನ್ನನ್ನು ದೇವರೇ ಕಾಪಾಡುತ್ತಾನೆ ನಾನು ಬರುವುದಿಲ್ಲ ಹೇಳಿ, ದೇವಾಲಯದಲ್ಲಿಯೇ ಉಳಿದರು.

ಮುಂದೆ ನದಿಯ ನೀರಿನ ಮಟ್ಟ ಇನ್ನಷ್ಟು ಎತ್ತರ ಏರಿದಾಗ, ದೋಣಿಯಲ್ಲಿ ಬಂದ ಕೆಲವರು ಈ ವ್ಯಕ್ತಿಯನ್ನು ಕರೆದರು. ಆದರೆ ಆಗಲೂ ಸಹ ನನಗೆ ದೇವರೇ ಕಾಪಾಡುತ್ತೇನೆ, ನಾನು ಬರುವುದಿಲ್ಲ ಎಂದು ಈ ವ್ಯಕ್ತಿ ಹೇಳಿದರು.

ಮುಂದೆ ನದಿಯ ಮಟ್ಟ ಏರಿದಂತೆ ಈ ವ್ಯಕ್ತಿಯು ದೇವಳದ ಜಗುಲಿ, ದೇವಳದ ಗರ್ಭಗೃಹ, ನಂತರ ದೇವಳದ ಸೂರಿನ ಮೇಲೆ ಏರಿ ಕುಳಿತರು.

ಆಗ ರಕ್ಷಣಾದಳದವರು ಹೆಲಿಕಾಪ್ಟರ್ ಮೂಲಕ ಬಂದು ಹಗ್ಗ ಇಳಿಸಿ, ಈ ವ್ಯಕ್ತಿಯನ್ನು ಮೇಲೆ ಬರುವಂತೆ ಕೂಗಿ ಹೇಳಿದರು. ಆಗಲೂ ಸಹ ಈ ವ್ಯಕ್ತಿಯು ನನಗೆ ದೇವರು ಕಾಪಾಡುತ್ತಾನೆ ನಾನು ಬರುವುದಿಲ್ಲ ಎಂದು ಹೇಳಿ ಹಗ್ಗವನ್ನು ಹಿಡಿದು ಮೇಲೆ ಹತ್ತಲು ಹೋಗಲಿಲ್ಲ. ಕೊನೆಗೆ ನದಿಯ ಪ್ರವಾಹ ಉಕ್ಕೇರಿದಾಗ, ನೀರಿನಲ್ಲಿ ಕೊಚ್ಚಿಕೊಂಡು ಹೋದ ಈ ವ್ಯಕ್ತಿ ಪ್ರಾಣ ಕಳೆದುಕೊಂಡರು.

ಸತ್ತು ಸ್ವರ್ಗಕ್ಕೆ ಹೋದ ಈ ವ್ಯಕ್ತಿಯು, ದೇವರನ್ನು ಕಂಡು, ನಾನು ಅಷ್ಟು ನಿಷ್ಠೆಯಿಂದ ನಿನ್ನ ಸೇವೆ ಮಾಡಿದರೂ ನೀನು ಕರುಣೆ ತೋರಲಿಲ್ಲ, ನನ್ನನ್ನು ಏಕೆ ರಕ್ಷಿಸಲಿಲ್ಲ ಎಂದು ದುಃಖದಿಂದ ಕೇಳಿದರು.

ಆಗ ದೇವರು, ನಿನ್ನನ್ನು ಪ್ರತಿ ಸಂದರ್ಭದಲ್ಲಿಯೂ ಕರೆತರುವಂತೆ ಜನರನ್ನು, ದೋಣಿಯವರನ್ನು, ರಕ್ಷಣಾದಳದವರನ್ನು, ಕೊನೆಗೆ ಹೆಲಿಕಾಪ್ಟರ್ ನವರನ್ನೂ ನಿನ್ನಳಿಗೆ ಹೋಗುವಂತೆ ಪ್ರೇರೇಪಿಸಿದ್ದು ನಾನೇ. ನಾನೇ ಸ್ವತಃ ಬರಲು ಹೇಗೆ ಸಾಧ್ಯ ? ನೀನು ಇದನ್ನು ಅರ್ಥ ಮಾಡಿಕೊಳ್ಳಲಿಲ್ಲ ಎಂದರು.

ನಿತ್ಯ ಜೀವನದಲ್ಲಿ ನಾವೂ ನೋಡುತ್ತೇವೆ. ಕೆಲವರು ಸದಾ ದೇವರಿಂದ ಒಳ್ಳೆಯದನ್ನು ಬೇಡುತ್ತಿರುತ್ತಾರೆ. ಆದರೆ ಒಳ್ಳೆಯ ಅವಕಾಶಗಳು ಬಂದಾಗ ಅದನ್ನು ದೇವರೇ ನೀಡಿದ ಅವಕಾಶವೆಂದು ತಿಳಿಯದೇ, ಸ್ವೀಕರಿಸಲು ಹಿಂಜರಿಯುತ್ತಾರೆ. ಅಲ್ಲವೇ ?

## ಸೆಪ್ಟೆಂಬರ್ 23 ರ ಸಭೆಯ ಝಲಕ್












## ಕಾರ್ಯದರ್ಶಿಯವರ ವರದಿ



ತಾರೀಕು 23/9/2025 ರಂದು ರೋಟರಿ ಐಸಿರಿಯ 12ನೇ ವಾರದ ಸಭೆ RCC ಕಾರ್ಯಾಲಯದಲ್ಲಿ ನಡೆಯಿತು. ರೊ. ಗುರುಪ್ರಸಾದ್ ಕಾಮತ್ ಅವರು ಕೊರಳಲಾಂಛನ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. ಎ. ಗಣೇಶ್ ಪ್ರಾರ್ಥನೆ ನಡೆಸಿದರು. ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ವಾರದ ವರದಿಯನ್ನು ಮಂಡಿಸಿದರು.

ಕೋಶಾಧಿಕಾರಿ ರೊ. ಎ. ಗಣೇಶ್ ಅವರು ಜಿಲ್ಲಾ ಇಂಟರಾಕ್ಟ್ ಅಸೆಂಬ್ಲಿಯ ಆಯವ್ಯವ ಪಟ್ಟಿಯನ್ನು ಮಂಡಿಸಿದರು. ಇದನ್ನು ಜಿಲ್ಲಾ ಇಂಟರಾಕ್ಟ್ ಚೇರ್ಮನ್ ಗೆ ಹಸ್ತಾಂತರಿಸಬೇಕಾಗಿ ತಿಳಿಸಿದರು. ಅಲ್ಲದೆ ಕೃತಜ್ಞತಾ ಪತ್ರ ಕಳಿಸುವ ಬಗ್ಗೆ ತಿಳಿಸಿದರು.

ರೊ. ಸ್ಮಿತಾ ಜಿ ಕಾಮತ್ ಅವರು ಮುಂಬರುವ ವಲಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯ ಬಗ್ಗೆ ಮಾಹಿತಿ ನೀಡಿದರು. ಅಲ್ಲದೆ ರೋಟರಿ ಅಂತರಾಷ್ಟ್ರೀಯ ವಲಯ 7 ಇದರಿಂದ ಬಂದಿರುವ TRF ದೇಣಿಗೆ ಸಂಗ್ರಹಿಸುವ ಪೆಟ್ಟಿಗೆ ಬಗ್ಗೆ ವಿವರ ನೀಡಿದರು.

ವಾರದ ಬುಲೆಟಿನ್ ಐಶ್ವರ್ಯವನ್ನು ರೊ. ಎ. ಗಣೇಶ್ ಬಿಡುಗಡೆಗೊಳಿಸಿದರು. ಸಂಪಾದಕರಾದ ರೊ. ರಾಜೇಶ್ ಡಿ ಶೆಣೈ ಅವರು ಸಹಕರಿಸಿದರು. ಈ ಬುಲೆಟಿನ್ ಗೆ ರೊ. ಸುಕೇಶ್ ಕುಂದರ್ ರವರು ನೀಡಿರುವ ಮಾಹಿತಿ ಬಗ್ಗೆ ತಿಳಿಸಿದರು. ಜೊತೆಗೆ ಇಂಟರಾಕ್ಟ್ ಅಸೆಂಬ್ಲಿಗೆ ಹಣ ಒಗ್ಗೂಡಿಸಿದ ಸದಸ್ಯರನ್ನು ಪ್ರಶಂಸಿಸಿ ಮುಂದಿನ ವರ್ಷವೂ ಇದೇ ರೀತಿ ಸಹಕಾರ ನೀಡಲು ಕೋರಿದರು.

ಸದಸ್ಯರ ಅವಕಾಶದಲ್ಲಿ ರೊ. ಗುರುಪ್ರಸಾದ್ ಕಾಮತ್ ಅವರು ರೋಟರಿ ಜಿಲ್ಲೆಯಾದ್ಯಂತ ಇರುವ ಆತ್ಮೀಯ ರೋಟರಿ ಸದಸ್ಯರು ತುಂಬುಹೃದಯದಿಂದ ಸಹಕರಿಸಿದ್ದಕ್ಕೆ ಹಣ ಒಟ್ಟುಗೂಡಿಸಲು ಸಹಕಾರಿಯಾಯಿತು ಎಂದು ಹೇಳಿದರು. ಸದಸ್ಯರೆಲ್ಲರ ಸ್ಪಂದನೆಗೂ ಮೆಚ್ಚಿಕೊಂಡರು.

ರೊ. ಪ್ರಭಾಕರ್ ಶೆಟ್ಟಿ ಮಾತನಾಡಿ ಜಿಲ್ಲಾ ಯೋಜನೆ ಪರಿಸರದ ಅಡಿಯಲ್ಲಿ ಜಿಲ್ಲೆಯಿಂದ ನಮ್ಮ ಕ್ಲಬ್ ಗೆ 90 ಕ್ಕೂ ಹೆಚ್ಚು ಗಿಡಗಳನ್ನು ಒದಗಿಸುವಲ್ಲಿ ಸಹಕರಿಸಿದ ಅಧ್ಯಕ್ಷ ರೊ. ಅನಿಲ್ ಕುಮಾರ್ ಅವರನ್ನು ಪ್ರಶಂಸಿಸಿದರು. ರೋಟರಿ ಐಸಿರಿಯದೇ ಆದ ಒಂದು ಮಿಯಾವಾಕಿ ವನವನ್ನು ಬೆಳೆಸುವ ಆಶಯ ವ್ಯಕ್ತಪಡಿಸಿದರು. ನಿಯೋಜಿತ ಅಧ್ಯಕ್ಷ ರೊ. ಸಂದೀಪ್ ಕುಮಾರ್ ಅವರು ಇಂಟರಾಕ್ಟ ಅಸೆಂಬ್ಲಿಗೆ ಸಹಕಾರ ನೀಡಿದ ಇಡೀ ರೋಟರಿ ಐಸಿರಿ ತಂಡಕ್ಕೆ ಧನ್ಯವಾದ ನೀಡಿದರು. ಈ ಕಾರ್ಯಕ್ರಮದಲ್ಲಿ ತಮಗಾದ ಅನುಭವಗಳನ್ನು ಹಂಚಿಕೊಂಡರು.

ಅಧ್ಯಕ್ಷರು ಇಂಟರಾಕ್ಟ್ ಅಸೆಂಬ್ಲಿಯ ಯಶಸ್ವಿಗಾಗಿ ಇವೆಂಟ್ chairman ರೊ. ಸಂದೀಪ್ ಕುಮಾರ್ ಮತ್ತು ಇವೆಂಟ್ ಸೆಕ್ರೆಟರಿ ರೊ. ಸುಕೇಶ್ ಕುಂದರ್ ಅವರನ್ನು ಗುರುತಿಸಿದರು. ಜಿಲ್ಲಾ ಕಾರ್ಯಕ್ರಮದ ಆಯವ್ಯಯ ಮಂಡನೆ ಮಾಡಿದ ರೊ. ಎ. ಗಣೇಶ್ ಅವರಿಗೆ ಕೃತಜ್ಞತೆ ಸಲ್ಲಿಸಿದರು. ಸದ್ಯದಲ್ಲೇ ವಲಯ ಸಾಂಸ್ಕೃತಿಕ ಸ್ಪರ್ಧೆ ಬಗ್ಗೆ ಮಾಹಿತಿ ನೀಡುವುದಾಗಿ ತಿಳಿಸಿದರು.

ಅದೃಷ್ಟಶಾಲಿ ವ್ಯಕ್ತಿ ಆಯ್ಕೆಯನ್ನು ರೊ. ಗೀತಾಶ್ರೀ ಉಪಾಧ್ಯ ನಡೆಸಿ ಅವರೇ ಆಯ್ಕೆಗೊಂಡರು. ಅಧ್ಯಕ್ಷರು ಅವರನ್ನು ಗುರುತಿಸಿದರು. ಕಾರ್ಯದರ್ಶಿ ಧನ್ಯವಾದ ಸಮರ್ಪಿಸಿದರು. ರೊ. ಗುರುಪ್ರಸಾದ್ ಕಾಮತ್ ಅವರು ಕೊರಳಲಾಂಚನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.


## "ಐಶ್ವರ್ಯ" 12ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ **ಹನ್ನೆರಡನೆಯ** ಆವೃತ್ತಿಯನ್ನು ಕೋಶಾಧಿಕಾರಿ MPHF. ಡಾ. ಎ. ಗಣೇಶರವರು 23/09/2025 ರಂದು ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ **ಹನ್ನೆರಡ**ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ರೊ. ಗೀತಾಶ್ರೀ ಉಪಾಧ್ಯ ನಡೆಸಿದರು ಮತ್ತು ಅವರೇ ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು.




ಪೋಲಿಯೋ ಹನಿ ಅಭಿಯಾನಕ್ಕೆ ಕೈ ಜೋಡಿಸಿದ ರೋಟರಿ ಸಂಸ್ಥೆಯು ಮನೆಮಾತಾಗಿದೆ. ಈ ಅಭಿಯಾನದ ನಿಧಿ ಸಂಚಯನಕ್ಕಾಗಿ, ಹನಿಗೂಡಿ ಹಳ್ಳವೆಂಬಂತೆ ದಾನಿಗಳ ಉದಾರ ದೇಣಿಗೆ ಸ್ವೀಕರಿಸಲು ಹುಂಡಿಯೊಂದನ್ನು ರೋಟರಿ ಐಸಿರಿಗೆ ಒದಗಿಸಲಾಗಿದೆ.